**<u>ಸಾಕ್ಷಿಯನ್ನು ದಿನಾಂಕಃ 13-06-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರವರಿಂದಃ</u>**

ನಾನು ಓದು ಬರಹ ಕಲಿತಿದ್ದೇನೆ. ಹೊಲ ಮತ್ತು ಮನೆಯ ಸಂಬಂದ ಈ ದಾವೆಯನ್ನು ವಾದಿಯರು ಸಲ್ಲಿಸಿದ್ದು ನನಗೆ ಸರ್ವೆ ನಂಬರು ಮತ್ತು ಡೋರ್ ನಂಬರು ಗೊತ್ತಿರುವುದಿಲ್ಲ. ಮೂಲತಃ ಸದರಿ ಮನೆ ಹಾಗೂ ಹೊಲಗಳು ವೀರಬಸಯ್ಯನಿಗ ಸಂಬಂದ ಪಟ್ಟವುಗಳು. ವೀರಬಸಯ್ಯನಿಗೆ ಹೊಲ ಮನೆಗಳು ತಂದೆಯಿಂದ ಬಂದಿರುತ್ತವೆ. ವೀರಬಸಯ್ಯನ ತಂದೆಯ ಹೆಸರು ಚಂದ್ರಶೇಖರಯ್ಯ. ನಾನು ಚಂದ್ರಶೇಖರಯ್ಯನನ್ನು ನೋಡಿದ್ದೇನೆ. ಚಂದ್ರಶೇಖರಯ್ಯನಿಗೆ ವೀರಬಸಯ್ಯ, ಬಾಗ್ಯಮ್ಮ, ಮೈತ್ರಮ್ಮ ಮತ್ತು ಮಂಜಮ್ಮ ಎಂಬ ಮಕ್ಕಳು ಇದ್ದರು. ಚಂದ್ರಶೇಖರಯ್ಯ ಮೃತ ಪಟ್ಟ ನಂತರ ಆತನ ಎಲ್ಲಾ ಮಕ್ಕಳಿಗೂ ಆತನ ಅಸ್ತಿಯಲ್ಲಿ ಹಕ್ಕು ಬರುತ್ತದೆ ಅಂದರೆ ಸರಿ. ಖಂಡಿತ ಖರೀದಿ ಕರಾರು ಪತ್ರವನ್ನು ತಾಯಿ ಮತ್ತು ಮಕ್ಕಳು ಅಂದರೆ

**ಸಾಕ್ಷಿಯ ಸಹಿ**

ಗಿರಿಜಮ್ಮ, ವೀರಬಸಯ್ಯ, ಮೈತ್ರಮ್ಮ ಹಾಗೂ ಮಂಜಮ್ಮ ಬಸವರಾಜಪ್ಪನಿಗೆ ಬರೆದುಕೊಟ್ಟಿರುವರು. ಸದರಿ ದಾಖಲೆಗೆ ಹೆಣ್ಣುಮಕ್ಕಳೂ ಕೂಡ ಸಹಿ ಮಾಡಿರುವರು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಂದ್ರಶೇಖರಯ್ಯನ ಹೆಣ್ಣು ಮಕ್ಕಳಿಗೆ ಅಸ್ತಿಯಲ್ಲಿ ಪಾಲು ಕೊಡಲು ತಪ್ಪಿಸಲು ನಾವೆಲ್ಲಾ ಮಿಲಾಪಿಯಾಗಿ ಖರಾರು ಪತ್ರವನ್ನು ಸೃಷ್ಟಿಸಿದ್ದೇವೆ ಅಂದರೆ ಸರಿಯಲ್ಲ. ಬಸವರಾಜಪ್ಪನು ದಾವಾ ಸ್ವತ್ತಿನ ಸ್ವಾದಿನದಲ್ಲಿರುವನು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗಿರಿಜಮ್ಮನ ಮರಣ ನಂತರ ಪ್ರತಿವಾದಿ ನಂ. 2(ಎ) ಇಂದ (ಸಿ) ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿರುವರು ಅಂದರೆ ಸರಿಯಲ್ಲ. 3 ನೇ ಪ್ರತಿವಾದಿ ದಾವಾ ಅಸ್ತಿಯ ಸ್ವಾಧೀನದಲ್ಲಿಯೇ ಇಲ್ಲ ಅಂದರೆ ಸರಿಯಲ್ಲ. ಬಸವರಾಜಪ್ಪ ನನಗೆ ತಮ್ಮನಾಗಬೇಕು. ಆದ ಕಾರಣ ನಾನು ಅತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

13-06-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ.**

**ಸಾಕ್ಷಿಯ ಸಹಿ**